**ದಿನಾಂಕಃ 23-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ವಾದಿ ಪರ ಶ್ರೀ. ಎಂ ಎಸ್ ಬಿ ವಕೀಲರಿಂದಃ-**

ತಮ್ಮ ಮುಖ್ಯ ಸಾಕ್ಷ್ಯ ಪ್ರಮಾಣ ಪತ್ರವನ್ನು ತಾವೇ ಹೇಳಿ ಬರೆಸಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ದಾವಾ ಸ್ವತ್ತನ್ನು ಯಾರಿಂದ ಯಾವಾಗ ಖರೀದಿ ಮಾಡಿರುತ್ತೀರಾ ಎಂದರೆಸ ಸಾಕ್ಷಿ ದಿನಾಂಕ 01.08.1984ರಂದು ಶಿವಲಿಂಗಯ್ಯ ಬಿನ್ ಲೇಟ್ ಬಸವೇಗೌಡರವರಿಂದ ಕ್ರಯಕ್ಕೆ ಖರೀದಿ ಮಾಡಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿ ಯನ್ನು ಖರೀದಿಸುವ ಪೂರ್ವದಲ್ಲಿ ಏನೆಲ್ಲಾ ದಾಖಲೆಗಳನ್ನು ನೀವು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಎಂ ಆರ್ ಮತ್ತು ಪಹಣಿ ಪತ್ರಿಕೆ ಎನ್ನುತ್ತಾರೆ. ಸದರಿ ತಾವು ಪರಿಶೀಲಿಸಿರುತ್ತೇನೆ ಎಂದು ಹೇಳಿದ ಪಹಣಿ ಮತ್ತು ಎಂ ಆರ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ತಾವು ಖರೀದಿ ಮಾಡುವ ಪೂರ್ವದಲ್ಲಿ ಶಿವಲಿಂಗಯ್ಯರವರ ಹೆಸರಿಗೆ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯು ಬಸವೇ ಗೌಡ ಬಿನ್ ಮಾಸ್ತಿಗೌಡರವರಿಗೆ ಸರ್ಕಾರದಿಂದ 1979ರಲ್ಲಿ ಮಂಜೂರಾದ ಮೂಲ ಆಸ್ತಿ ಎದರೆ ಸರಿಯಲ್ಲ. ಬಸವೇಗೌಡ ತೀರಿಕೊಂಡ ನಂತರ ಸದರಿ ದಾವಾ ಸ್ವತ್ತಿನ ಸಂಬಂದ ತಹಶೀಲ್ದಾರ್ ಚನ್ನಪಟ್ಟಣ ಕಾರ್ಯಾಲಯದಲ್ಲಿ 1984ರಲ್ಲಿ ಆರ್ ಆರ್ ಟಿ ಕೇಸ್ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರಂತೆ ದಿನಾಂಕ 22.08.1986ರಲ್ಲಿ ಕೆಂಪಮ್ಮ ಕೋಂ ಬಸವೇಗೌಡ ರವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1986 ರಿಂದ 2019ರ ವರೆಗೆ ದಾವಾ ಆಸ್ತಿಯ ಖಾತೆಯು ಕೆಂಪಮ್ಮರವರ ಹೆಸರಿನಲ್ಲಿ ನಮೂದು ಆಗುತ್ತಾ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1979ರಿಂದ ಇಲ್ಲಿಯವರೆವಿಗೂ ಬಸವೇಗೌಡರವರ ಕುಟುಂಬಸ್ಧರು ದಾವಾ ಆಸ್ತಿಯಲ್ಲಿ ಸ್ವಾಧೀನ ಇದ್ದುಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. 2019ನೇ ಸಾಲಿನಲ್ಲಿ ವಾದಿಯ ವಿರುದ್ದ ಇದೇ ಚನ್ನಪಟ್ಟಣ ತಹಶೀಲ್ದಾರ್ ಕಛೇರಿಯಲ್ಲಿ ಆರ್ ಆರ್ ಟಿ ಕೇಸ್ ದಾಖಲು ಮಾಡಿದ್ದೀರಾ ಎಂದರೆ ಸರಿ. ಸದರಿ ಆರ್ ಆರ್ ಟಿ ಕೇಸ್ ನಲ್ಲಿ ನಾನು ಈ ದಾವೆಯ ವಾದಿಯ ವಿಳಾಸವನ್ನು ತಪ್ಪಾಗಿ ನಮೂದು ಮಾಡಿದ್ದೆ ಎಂದರೆ ಸರಿಯಲ್ಲ. ತಹಶೀಲ್ದಾರ್ ಮುಂದೆ ದಾಖಲು ಮಾಡಿದ್ದ ಆರ್ ಆರ್ ಟಿ ಕೇಸ್ ನನ್ನ ಪರ ಆದೇಶ ಆಗಿದ್ದು, ಸದರಿ ಆದೇಶವನ್ನು ಈ ದಾವೆಯ ವಾದಿಯು ಎ ಸಿ ರವರ ಮುಂದೆ ಪ್ರಶ್ನೆ ಮಾಡಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿ ಕೇಸ್ ವಜಾ ಆಗಿದೆ ಎನ್ನುತ್ತಾರೆ. ಎ ಸಿ ರವರು ತಮ್ಮ ಆದೇಶದಲ್ಲಿ ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ಹೇಳಿ ಅಪೀಲನ್ನು ವಜಾ ಮಾಡಿರುತ್ತಾರೆ ಎಂದರೆ ಸರಿ. ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದು ಹೇಳಿದ ಶಿವಲಿಂಗಯ್ಯ ರವರ

ಹೆಸರಿಗೆ ಈ ದಾವಾ ಆಸ್ತಿ ಮತ್ತು ಬೇರೆ ದಾವಾ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಈದಾವೆಯ ವಾದಿಯಾಗಲಿ ಅಥವಾ ಕುಟುಂಬಸ್ದರಾಗಲಿ ಯಾರಿಗೂ ಪರಭಾರೆ ಮಾಡಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯನ್ನು ತಾವು ಶಿವಲಿಂಗಯ್ಯರವರಿಂದ ಖರೀದಿ ಮಾಡಿದ್ದೇನೆ ಎಂದು ಹೇಳಿದು ದಾವಾ ಆಸ್ತಿಯು ಶಿವಲಿಂಗಯ್ಯರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ತಾವು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂರದೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲದಿದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ